428 ಶ್ರೀ ಪಾಟೀಲ್ ಎ.ಎಸ್. : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೀದರ್ ಹಾಗೂ ವಿಜಾಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಯಾವಾಗ ಸ್ಥಾಪನೆಯಾಗಿವೆ;

ಆ) ಸದರಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳನ್ನು ಪರಸ್ಪರ ಹೋಲಿಸಿದಾಗ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕ್ ಯಾವುದು;

ಇ) 2009ರವರೆಗೆ ಈ ಬ್ಯಾಂಕುಗಳು ಹೊಂದಿರುವ ಆರ್ಥಿಕ ಸ್ಥಿತಿ ಏನು?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು):

ಅ) ಬೀದರ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಬೀದರ್ ಇದು ದಿನಾಂಕ 13.8.1922ರಲ್ಲಿ ಸ್ಥಾಪನೆಯಾಗಿದೆ ಹಾಗೂ ವಿಜಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ವಿಜಾಪುರ ಇದು ದಿನಾಂಕ 28.7.1919ರಲ್ಲಿ ಸ್ಥಾಪನೆಯಾಗಿದೆ.

ಆ) ನಬಾರ್ಡು ದಿನಾಂಕ 31.3.2007ಕ್ಕೆ ಇದ್ದಂತೆ ನಡೆಸಿರುವ ಬಿಜಾಪುರ ಡಿಸಿಸಿ ಬ್ಯಾಂಕಿನ ಪರಿವೀಕ್ಷಣಾ ವರದಿಯಲ್ಲಿ ಸದರಿ ಸಕ್ಕರೆ ಕಾರ್ಖಾನೆಯು ನೆಗೆಟಿವ್ ನೆಟ್‌ವರ್ತ್ ಹೊಂದಿದ್ದರೂ ಸಹ ಹಿರೇಬೇವನೂರಿನ ಜ್ಞಾನಯೋಗಿ ಶಿವಕುಮಾರ ಸಕ್ಕರೆ ಕಾರ್ಖಾನೆಗೆ ಸಾಲ ನವೀಕರಿಸಿರುವುದನ್ನು ಆಕ್ಷೇಪಿಸಿ ಇನ್ನು ಮುಂದೆ ಇಂತಹ ಸಾಲ ಮಂಜೂರಾತಿಗೆ ಆರ್‌ಬಿಐ/ ನಬಾರ್ಡ್ ಮಾರ್ಗಸೂಚಿಗಳನ್ನು ಪಾಲಿಸಲು ಸೂಚಿಸಿದ್ದರೂ ಸಹ ಬಿಜಾಪುರ ಡಿಸಿಸಿ ಬ್ಯಾಂಕು ಕಾರ್ಖಾನೆಯ ಆರ್ಥಿಕ ಸ್ಥಿತಿಯನ್ನು ಪರಿಗಣಿಸದೇ ಯಾವುದೇ ಪ್ರಾಜೆಕ್ಟ್ ರಿಪೋರ್ಟ್ ಮತ್ತು ಹಣಕಾಸು ತಃಖ್ತೆಗಳಿಲ್ಲದೇ ದೊಡ್ಡ ಪ್ರಮಾಣದ ಸಾಲ ಒಟ್ಟು ರೂ. 1780.00 ಲಕ್ಷಗಳನ್ನು ದಿನಾಂಕ 5.12.2008 ಮತ್ತು

16.1.2009 ರಂದು ಜರುಗಿದ ಆಡಳಿತ ಮಂಡಳಿ ಸಭೆಯಲ್ಲಿ ಮಂಜೂರು ಮಾಡಿದ್ದು ಈ ಪೈಕಿ ರೂ. 710.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಅಪೆಕ್ಸ್ ಬ್ಯಾಂಕಿನ ಮುಂದಾಳತ್ವದಲ್ಲಿ ಮೇಲ್ಕಂಡ ಸಕ್ಕರೆ ಕಾರ್ಖಾನೆಗೆ ನೀಡಲಾಗಿದ್ದ ಕನ್ಸಾರ್ಟಿಯಂ ಸಾಲ ರೂ. 5.00 ಕೋಟಿ ಇದರಲ್ಲಿ ಬಿಜಾಪುರ ಡಿಸಿಸಿ ಬ್ಯಾಂಕು ಸಮೂಹ ಬ್ಯಾಂಕುಗಳಲ್ಲಿ ಸೇರಿದ್ದು ಈ ಸಾಲ ನೀಡಿಕೆಯಲ್ಲಿ ಬಾಕಿ ಇದ್ದ ಸಾಲ ಸುಸ್ತಿಯಾಗಿದ್ದ ಕಾರಣ ಅಪೆಕ್ಸ್ ಬ್ಯಾಂಕಿನ ಮುಖಂಡತ್ವದಲ್ಲಿ ಸಾಲ ವಸೂಲಾತಿಗಾಗಿ ಸಹಕಾರ ಸಂಘಗಳ ನಿಬಂಧಕರ ನ್ಯಾಯಾಲಯದಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 70ರ ಅನ್ವಯ ದಾವೆ ದಾಖಲು ಮಾಡಿದ್ದು ಇತ್ಯರ್ಥಕ್ಕೆ ಬಾಕಿ ಇರುವ ಸಂಗತಿಯನ್ನು ಕಡೆಗಣಿಸಿ ಸದರಿ ಕಾರ್ಖಾನೆಗೆ ಮೇಲ್ಕಂಡಂತೆ ರೂ. 1780.00 ಲಕ್ಷಗಳ ಸಾಲ ಮಂಜೂರು ಮಾಡಿರುವುದು ನಿಯಮ ಬಾಹಿರವಾಗಿರುತ್ತದೆ.

ಬಿಜಾಪುರ ಡಿಸಿಸಿ ಬ್ಯಾಂಕು ಮೇಲ್ಕಂಡ ಸಕ್ಕರೆ ಕಾರ್ಖಾನೆಗೆ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಸಾಲದ ಮೊಬಲಗನ್ನು ಏಕಕಾಲದಲ್ಲಿ (ಒಂದೆ ಬಾರಿ) ಡ್ರಾ ಮಾಡಿರುವುದನ್ನು ಗಮನಿಸಿದಾಗ ಮಂಜೂರಾದ ಉದ್ದೇಶಕ್ಕೆ ಬಿಡುಗಡೆಯಾದ ಸಾಲ ಬಳಕೆಯಾಗದಿರುವುದನ್ನು ದೃಢಪಡಿಸುತ್ತದೆ. ಈ ಪೈಕಿ ಸಕ್ಕರೆ ದಾಸ್ತಾನಿನ ಮೇಲೆ ರೂ. 300.00 ಲಕ್ಷಗಳ ಹೈಪಾಥಿಕೇಶನ್ ಸಾಲ ಸೇರಿದ್ದು ಕಾರ್ಖಾನೆ ಉತ್ಪಾದಿಸುತ್ತಿರುವ ಸಕ್ಕರೆಯ ದಾಸ್ತಾನನ್ನು ಸಂರಕ್ಷಿಸಲು ಸೂಕ್ತ ಉಗ್ರಾಣದ ವ್ಯವಸ್ಥೆ ಹೊಂದಿರದೆ ಬ್ಯಾಂಕು ಡಬಲ್ ಲಾಕ್ ಸಿಸ್ಟಂ ಹೊಂದಲು ಸಾಧ್ಯವಾಗಿರುವುದಿಲ್ಲ. ಇಂತಹ ಕ್ರಮವು ಬಿಜಾಪುರ ಡಿಸಿಸಿ ಬ್ಯಾಂಕಿನ ಆರ್ಥಿಕ ಹಿತಾಸಕ್ತಿಗೆ ಧಕ್ಕೆ ತರುವಂತಹುದಾಗಿದೆ.

ಇ) ಹಾಲಿ ಲಭ್ಯವಿರುವ ಮಾಹಿತಿಯ ಪ್ರಕಾರ ದಿನಾಂಕ: 31.3.2009 ರವರೆಗೆ ಬಿಜಾಪುರ ಮತ್ತು ಬೀದರ್ ಡಿಸಿಸಿ ಬ್ಯಾಂಕುಗಳು ಲಾಭದಾಯಕವಾಗಿ ನಡೆಯುತ್ತಿವೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. 2008-09ನೇ ಸಾಲಿನ ಲೆಕ್ಕಪತ್ರಗಳು ಇನ್ನೂ ಆಡಿಟ್ ಆಗಬೇಕಾಗಿರುತ್ತವೆ ಎಂಬುದನ್ನು ಗಮನಿಸಬಹುದು.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಪಾಟೀಲ್ ಎ.ಎಸ್. ಇವರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 428ಕ್ಕೆ ಅನುಬಂಧ

ಬಿಜಾಪುರ ಡಿಸಿಸಿ ಬ್ಯಾಂಕಿನ ಆರ್ಥಿಕ ಸ್ಥಿತಿಯ ಬಗ್ಗೆ ಮಾಹಿತಿ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ವಿವರಗಳು	ದಿ: 31.3.2008 ರಲ್ಲಿದ್ದಂತೆ	ದಿ: 31.3.2009 ರಲ್ಲಿದ್ದಂತೆ (ತಾತ್ಕಾಲಿಕ)
1.	ಸದಸ್ಯರು	12528	13764
2.	ಷೇರು ಬಂಡವಾಳ	1771.85	2237.37
3.	ಸ್ವಂತ ನಿಧಿ	4174.24	4842.29
4.	ಮೀಸಲು ನಿಧಿಗಳು	5744.46	5968.49
5.	ಠೇವಣಿಗಳು	29644.83	34851.18
6.	ಪಡೆದ ಸಾಲಗಳು	12034.32	22560.65
7.	ಹೂಡಿಕೆಗಳು	16361.64	28264.41
8.	ಮುಂಗಡಗಳು	30378.23	39842.67
9.	ವಿತರಿಸಿದ ಸಾಲಗಳು	38817.59	44824.08
10.	ದುಡಿಯುವ ಬಂಡವಾಳ	50634.44	71024.18
11.	ನಿವ್ವಳ ಲಾಭ	250.27	449.16
12.	ಶೇಕಡಾ ಸಾಲ ವಸೂಲಾತಿ	88.51	92.01

ಬೀದರ್ ಡಿಸಿಸಿ ಬ್ಯಾಂಕಿನ ಆರ್ಥಿಕ ಸ್ಥಿತಿಯ ಬಗ್ಗೆ ಮಾಹಿತಿ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ವಿವರಗಳು	ದಿ: 31.3.2008 ರಲ್ಲಿದ್ದಂತೆ	ದಿ: 31.3.2009 ರಲ್ಲಿದ್ದಂತೆ (ತಾತ್ಕಾಲಿಕ)
1.	ಸದಸ್ಯರು	385	385
2.	ಷೇರು ಬಂಡವಾಳ	2111.31	2483.15
3.	ಸ್ವಂತ ನಿಧಿ	4986.28	5581.57
4.	ಮೀಸಲು ನಿಧಿಗಳು	6543.84	6290.29
5.	ಠೇವಣಿಗಳು	31750.43	36197.53
6.	ಪಡೆದ ಸಾಲಗಳು	20584.65	25884.17
7.	ಹೂಡಿಕೆಗಳು	12522.19	15076.76
8.	ಮುಂಗಡಗಳು	45849.19	55148.54
9.	ವಿತರಿಸಿದ ಸಾಲಗಳು	61015.07	45518.42
10.	ದುಡಿಯುವ ಬಂಡವಾಳ	62579.31	74563.32
11.	ನಿವ್ವಳ ಲಾಭ	293.31	362.66
12.	ಶೇಕಡಾ ಸಾಲ ವಸೂಲಾತಿ	86.95	81.03